# 04. ವಸಂತ ಮುಖ ತೋರಲಿಲ್ಲ

ನಮ್ಮ ಸಮಾಜದಲ್ಲಿ ಇಂದಿಗೂ ಎಷ್ಟೋ ಜನರು ಶೋಷಣೆಗೊಳಗಾಗಿದ್ದಾರೆ. ವಸಂತಕಾಲದಂತೆ ಸಮೃದ್ಧವಾಗುವ ಒಳ್ಳೆಯ ಸುದಿನಗಳು ಬರುವುದು ಯಾವಾಗ ಎಂಬ ಪ್ರಶ್ನೆಯನ್ನು ಆಧರಿಸಿ ಈ ಕವನ ರಚಿತವಾಗಿದೆ. ಮಹಿಳಾ ಶೋಷಣೆಯೆಂಬುದು ಭ್ರೂಣದಿಂದಲೇ ಪ್ರಾರಂಭವಾಗುವುದು. ಅದು ಅವಳ ಬಾಲ್ಯ, ಯೌವನ, ಮುಪ್ಪು ಎಲ್ಲವನ್ನೂ ಆಕ್ರಮಿಸಿಕೊಂಡಿದೆ. ಇಲ್ಲಿ ಯಜಮಾನನ ಮನೆಯಲ್ಲಿ ಕೆಲಸ ಮಾಡುವ ಪುಟ್ಟಪೋರಿ (ಹುಡುಗಿ)ಯ ಮನೆಯ ಸ್ಥಿತಿಯನ್ನು ಹಾಗೂ ಬಡವರ ಶ್ರಮಿಕರ ಬದುಕನ್ನು ಕುರಿತು ಮಾರ್ಮಿಕವಾಗಿ ಚಿತ್ರಿಸಲಾಗಿದೆ. ಬಡವರ, ಶ್ರಮಿಕರ ಬದುಕು ಇನ್ನೂ ಹಸನಾಗಿಲ್ಲ.

ಸಾಮಾಜಿಕ ನ್ಯಾಯ ದೊರೆತು, ಶೋಷಣೆ ಮುಕ್ತ ಸಮಾಜವಾದರೆ ಮಾತ್ರ ಸರ್ವರ ಏಳಿಗೆ ಸಾಧ್ಯ ಎಂಬುದು ಲೇಖಕಿಯರ ಆಶಯವಾಗಿದೆ. ಬಡತನದಲ್ಲಿರುವ ಹಸುಳೆಯೊಬ್ಬಳು ಯಜಮಾನನ ಮನೆಯಲ್ಲಿ ಕೆಲಸ ಮಾಡುತ್ತಿರುತ್ತಾಳೆ. ಯಜಮಾನನ ಮನೆಯಲ್ಲಿ ಹಬ್ಬದ ಸಂಭ್ರಮವಿರುತ್ತದೆ. ಅದನ್ನು ನೋಡಿದ ಆ ಮಗು ತನ್ನ ಮನೆಯ ಸ್ಥಿತಿಯನ್ನು ನೆನಪಿಸಿಕೊಂಡು ಬಡವರ ಮನೆಗೆ ವಸಂತನು(ಒಳ್ಳೆಯ ಸುದಿನ) ಬರಲು ಹೆದರುತ್ತಿದ್ದಾನಲ್ಲ ಎಂದುಕೊಳ್ಳುವ ಸನ್ನಿವೇಶ ಮಡುಗಟ್ಟಿ ನಿಂತಿದೆ. ವಸಂತಕಾಲದ ಪ್ರಕೃತಿಯ ಸಂಭ್ರಮದಲ್ಲಿ ಒಡೆಯನ ಮನೆಯ ಅಂಗಳದಲಿ ಮೈ ತುಂಬಿ(ಹಚ್ಚಹಸುರಾಗಿ) ನಿಂತ ಮಾವಿನ ಮರಗಳು ಆ ಪ್ರಕೃತಿಯ ಮಡಿಲಲ್ಲಿ ರೆಕ್ಕೆ ಬಿಚ್ಚಿ ಹಾರುವ ಹಕ್ಕಿಗಳು, ಪ್ರಕೃತಿಯ ಸೊಬಗನ್ನು ಮನದುಂಬಿ ಹಾಡುವ ಕೋಗಿಲೆಗಳು ಈ ಭೂಮಿಗೆ ಕಡಲು ಉಕ್ಕಿ ಹರಿಯುವ ಸಂಭ್ರಮ ಬಂದಿದೆ. ಇದೆ ಪ್ರಕೃತಿಯ ಸಂಭ್ರಮ.

ಮನೆಯ ಒಳಗೆ ಸಂಭ್ರಮದಿಂದಿರುವ ಒಡೆಯನ ಮಕ್ಕಳ ಬಟ್ಟೆಯ ಮೇಲೆ ಬಣ್ಣ ಬಣ್ಣದ ಚಿಟ್ಟೆಗಳ ಚಿತ್ರಗಳು, ಚಿತ್ತಾರ ಬಿಡಿಸಿದ ನವಿಲು(ರೆಕ್ಕೆ ಬಿಚ್ಚಿ ಸ್ವಚ್ಛಂದದಿಂದ ಹಾಡುವ ನವಿಲು) ಚಿತ್ರಗಳು ಆದರೆ ಹೊರಗಿರುವ ಈ **ಪುಟ್ಟ ಪೋರಿ, ಹಾಲುಗಲ್ಲದ ಹಸುಳೆ(ಚಿಕ್ಕಮಗು) ಮುಸುರೆ ತಿಕ್ಕುತ್ತಿದ್ದಾಳೆ.**

ಹಬ್ಬದ ಆ ಸಂಭ್ರಮದಲ್ಲಿ ಯಜಮಾನನ ಮನೆಯ ಬಾಗಿಲಲ್ಲಿ ತೂಗಾಡುತ್ತಿರುವ ಮಾವಿನೆಲೆಯ ತೋರಣ, ಮಲ್ಲಿಗೆ ಹೂವುಗಳು ಅರಳಿ ಮುಗುಳು ನಗೆ ಬೀರುತ್ತಿವೆ. ಹೊರಗೆ ಹಾಕಿರುವ ಹೊಳೆಯುವ ರಂಗೋಲಿಯಲ್ಲಿ ಥಳಥಳ ಎಂದು ಹೊಳೆಯುವ ಬಾಲ ರವಿಯ ಕಂಡು ಮೂಕವಿಸ್ಮಿತಳಾದ ಪುಟ್ಟಿ ಮತ್ತೆ ಮತ್ತೆ ತನ್ನ ಮನೆಯ ಸ್ಥಿತಿಗತಿಯನ್ನು ನೋಡುತ್ತಿದ್ದಾಳೆ, ನೆನಪಿಸಿಕೊಳ್ಳುತ್ತಿದ್ದಾಳೆ.

**ಗುಡಿಸಲಿನಲ್ಲಿ ಗೂರುತ್ತ(ಕೆಮ್ಮುತ್ತಾ) ಅಮ್ಮ ಮಲಗಿದ್ದಾಳೆ.** ತೂತು ಬಿದ್ದ ಸೀರೆಯಲಿ ಬಾಲ ರವಿ ಸೋರಗಿದ್ದಾನೆ. (ಅಮ್ಮ ಹರಿದ ಸೀರೆ ಉಟ್ಟಿದ್ದಾಳೆ. ಹರಿದ ಭಾಗ ಚಂದ್ರನ ಆಕಾರದಲ್ಲಿದೆ.) ಸುಣ್ಣ ಕಾಣದ ಗೋಡೆಗಳು ಮುಖ ಮುಚ್ಚಿಕೊಂಡಿವೆ (ಕಪ್ಪಾಗಿವೆ) ಕತ್ತಲೆ ಗವಿಯಂತಿರುವ ಗುಡಿಸಲೊಳಗೆ (ಬಡತನವೆಂಬ ಮನೆಯೊಳಗೆ) ಬರಲು ವಸಂತನಿಗೂ ಹೆದರಿಕೆ!

**ಕಮ್ಮಾರನ ಕುಲುಮೆ ಉರಿಯಲಿಲ್ಲ. ಕುಂಬಾರನ ತಿಗುರಿ (ಚಕ್ರ) ತಿರುಗಲಿಲ್ಲ ನೇಕಾರನ ಮಗ್ಗ ಉಸಿರಾಡಲಿಲ್ಲ ಕೇರಿಯ ಮಾರನ ಒಲೆ ಹೊತ್ತಲಿಲ್ಲ ಇವರಾರಿಗೂ ವಸಂತ ಮುಖ ತೋರಲಿಲ್ಲ!** (ಒಳ್ಳೆಯ ದಿನಗಳ ಬರಲಿಲ್ಲ, ಹಾಗೆಯೇ ಬಡವರಾಗಿಯೇ ಇದ್ದಾರೆ, ಶೋಷಣೆಯಿಂದ ಮುಕ್ತಿಹೊಂದಿಲ್ಲ. ಶ್ರಮಕ್ಕೆ ತಕ್ಕ ಫಲವಿಲ್ಲ) ಎಂದು ಶ್ರಮಿಕರ ಬದುಕನ್ನು ಕುರಿತು ಮಾರ್ಮಿಕವಾಗಿ ಚಿತ್ರಿಸಲಾಗಿದೆ. **ಪುಟ್ಟಿ ಮತ್ತೆ ಮತ್ತೆ ನೆಲವ ತಟ್ಟಿ! ಗುಡಿಸಲೊಳಗೆ ಬರಲು ವಸಂತ ಹೆದರಿದನೆ? ಹರಿದ ಚಿಂದಿ ಬಟ್ಟೆಗಳ ಕಂಡು ಅವನು ಮರುಗಿದನೆ? ಎಂದು ಪ್ರಶ್ನಿಸಿಕೊಳ್ಳುತ್ತಾಳೆ.**

## ಪ್ರಶ್ನೋತ್ತರಗಳು

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

**1. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ?**

**ಉತ್ತರ:** ಪುಟ್ಟ ಪೋರಿ ಹೊರಗೆ ಮುಸುರೆ ತಿಕ್ಕುತ್ತಿದ್ದಾಳೆ.

**2. ಪುಟ್ಟ ಪೋರಿಯ ಅಮ್ಮ ಎಲ್ಲಿ ಮಲಗಿದ್ದಾಳೆ?**

**ಉತ್ತರ:** ಅಮ್ಮ ಗುಡಿಸಲಿನಲ್ಲಿ ಮಲಗಿದ್ದಾಳೆ.

**3. ಯಾರಿಗೆ ವಸಂತಮುಖ ತೋರಲಿಲ್ಲ?**

**ಉತ್ತರ:** ಕಮ್ಮಾರನಿಗೆ, ಕುಂಬಾರನಿಗೆ, ನೇಕಾರನಿಗೆ, ಕೇರಿಯ ಮಾರನಿಗೆ ವಸಂತ ಮುಖ ತೋರಲಿಲ್ಲ.

**4. ಪುಟ್ಟಿಯ ಪ್ರಶ್ನೆಗಳೇನು?**

**ಉತ್ತರ:** ಗುಡಿಸಲೊಳಗೆ ಬರಲು ವಸಂತ ಹೆದರಿದನೆ? ಹರಿದ ಚಿಂದಿ ಬಟ್ಟೆಗಳ ಕಂಡು ಅವನು ಮರುಗಿದನೆ? ಎಂಬವು ಪುಟ್ಟಿಯ ಪ್ರಶ್ನೆಗಳಾಗಿವೆ.

**5. ಹಾಲುಗಲ್ಲದ ಹಸುಳೆ ಏನು ಮಾಡುತ್ತಿದ್ದಾಳೆ?**

**ಉತ್ತರ:** ಹಾಲುಗಲ್ಲದ ಹಸುಳೆ ಮುಸುರೆ ತಿಕ್ಕುತ್ತಿದ್ದಾಳೆ.

**6. ಇಳೆಗೆ ಯಾವ ಸಂಭ್ರಮ ಬಂದಿದೆ?**

**ಉತ್ತರ:** ಇಳೆಗೆ ಕಡಲು ಉಕ್ಕಿ ಹರಿಯುವ ಸಂಭ್ರಮ ಬಂದಿದೆ.

**7. ಬಾಲರವಿ ಎಲ್ಲಿ ಸೊರಗಿದ್ದಾನೆ?**

**ಉತ್ತರ:** ಬಾಲರವಿ ತೂತು ಬಿದ್ದ ಅಮ್ಮನ ಸೀರೆಯಲ್ಲಿ ಸೊರಗಿದ್ದಾನೆ.

**8. ವಸಂತ ಎಲ್ಲಿಗೆ ಬರಲು ಹೆದರಿದನು?**

**ಉತ್ತರ:** ಕತ್ತಲೆ ಗವ್ವೆನ್ನುವ ಗುಡಿಸಲೊಳಗೆ ವಸಂತ ಬರಲು ಹೆದರಿದನು.

**9. ಪುಟ್ಟಿ ಏಕೆ ಮೂಕವಿಸ್ಮಿತಳಾಗಿದ್ದಾಳೆ?**

**ಉತ್ತರ:** ಯಜಮಾನನ ಮನೆಯ ಹೊರಗೆ ಹಾಕಿರುವ ಹೊಳೆಯುವ ರಂಗೋಲಿಯಲ್ಲಿ ಥಳಥಳ ಎಂದು ಹೊಳೆಯುವ ಬಾಲ ರವಿಯ ಕಂಡು ಮೂಕವಿಸ್ಮಿತಳಾಗಿದ್ದಾಳೆ.

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

**1. ವಸಂತ ಮುಖ ತೋರಲಿಲ್ಲ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?**

**ಉತ್ತರ:** ಒಡೆಯನ ಮನೆಯ ಅಂಗಳದಲ್ಲಿ ಮಾವಿನ ಮರಗಳು (ಹಚ್ಚಹಸುರಾಗಿ) ಮೈ ತುಂಬಿ ನಿಂತವೆ. ಆ ಪ್ರಕೃತಿಯ ಮಡಿಲಲ್ಲಿ ಹಕ್ಕಿಗಳು ರೆಕ್ಕೆ ಬಿಚ್ಚಿ ಹಾರುತ್ತಿವೆ. ಪ್ರಕೃತಿಯ ಸೊಬಗನ್ನು ಕೋಗಿಲೆಗಳು ಮನ ದುಂಬಿ ಹಾಡುತ್ತಿವೆ. ಈ ಭೂಮಿಗೆ ಕಡಲು ಉಕ್ಕಿ ಹರಿಯುವ ಸಂಭ್ರಮ ವ್ಯಕ್ತವಾಗಿದೆ.

**2. ವಸಂತ ಮುಖ ತೋರಲಿಲ್ಲ ಕವನದಲ್ಲಿ ಶ್ರಮಿಕರ ಬದುಕನ್ನು ಕುರಿತು ಮಾರ್ಮಿಕವಾಗಿ ಹೇಗೆ ಚಿತ್ರಿಸಲಾಗಿದೆ.?**

**ಉತ್ತರ:** ಕಮ್ಮಾರನ ಕುಲುಮೆ ಉರಿಯಲಿಲ್ಲ, ಕುಂಬಾರನ ತಿಗುರಿ (ಚಕ್ರ) ತಿರುಗಲಿಲ್ಲ, ನೇಕಾರನ ಮಗ್ಗ ಉಸಿರಾಡಲಿಲ್ಲ, ಕೇರಿಯ ಮಾರನ ಒಲೆ ಹೊತ್ತಲಿಲ್ಲ. ಇವರಾರಿಗೂ ವಸಂತ ಮುಖ ತೋರಲಿಲ್ಲ! ಅಂದರೆ ಇವರಾರಿಗೂ ಒಳ್ಳೆಯ ದಿನಗಳ ಬರಲಿಲ್ಲ, ಹಾಗೆಯೇ ಬಡವರಾಗಿಯೇ ಇದ್ದಾರೆ, ಶೋಷಣೆಯಿಂದ ಮುಕ್ತಿಹೊಂದಿಲ್ಲ. ಶ್ರಮಕ್ಕೆ ತಕ್ಕ ಫಲವಿಲ್ಲ ಎಂದು ಶ್ರಮಿಕರ ಬದುಕನ್ನು ಕುರಿತು ಮಾರ್ಮಿಕವಾಗಿ ಚಿತ್ರಿಸಲಾಗಿದೆ.

**3. ಪುಟ್ಟ ಪೋರಿಯ ಯಜಮಾನನ ಮನೆಯಲ್ಲಿ ಯಾವ ರೀತಿಯ ಸಂಭ್ರಮವಿದೆ ?**

**ಉತ್ತರ:** ಪುಟ್ಟ ಪೋರಿಯ ಯಜಮಾನನ ಮನೆಯ ಒಳಗೆ ಸಂಭ್ರಮದಿಂದಿರುವ ಒಡೆಯನ ಮಕ್ಕಳ ಬಟ್ಟೆಯ ಮೇಲೆ ಬಣ್ಣ ಬಣ್ಣದ ಚಿಟ್ಟೆಗಳ ಚಿತ್ರಗಳು, ಚಿತ್ತಾರ ಬಿಡಿಸಿದ ನವಿಲು ಚಿತ್ರಗಳು, ಮನೆಯ ಬಾಗಿಲಲ್ಲಿ ತೂಗಾಡುತ್ತಿರುವ ಮಾವಿನೆಲೆಯ ತೋರಣ, ಮಲ್ಲಿಗೆ ಹೂವುಗಳು ಅರಳಿ ಮುಗುಳು ನಗೆ ಬೀರುತ್ತಿವೆ. ಹೊರಗೆ ಹಾಕಿರುವ ಹೊಳೆಯುವ ರಂಗೋಲಿಯಲ್ಲಿ ಬಾಲ ರವಿಯು ಥಳಥಳ ಎಂದು ಹೊಳೆಯುತ್ತಿದ್ದಾನೆ.

**4. ಪುಟ್ಟ ಪೋರಿಯ ಮನೆಯ ಪರಿಸ್ಥಿತಿ ಹೇಗಿದೆ ?**

**ಉತ್ತರ:** ಪುಟ್ಟ ಪೋರಿಯ ಅಮ್ಮ ಗುಡಿಸಲಿನಲ್ಲಿ ಗೂರುತ್ತ(ಕೆಮ್ಮುತ್ತಾ) ಮಲಗಿದ್ದಾಳೆ. ಅಮ್ಮನ ತೂತು ಬಿದ್ದ ಸೀರೆಯಲಿ ಬಾಲ ರವಿ ಸೊರಗಿದ್ದಾನೆ. ಸುಣ್ಣ ಕಾಣದ ಗೋಡೆಗಳು ಮುಖ ಮುಚ್ಚಿಕೊಂಡಿವೆ. ಕತ್ತಲೆ ಗವಿಯಂತಿರುವ ಗುಡಿಸಲೊಳಗೆ ಬರಲು ವಸಂತನಿಗೂ ಹೆದರಿಕೆ! ಈ ರೀತಿಯಾಗಿ ಪುಟ್ಟ ಪೋರಿಯ ಮನೆಯ ಪರಿಸ್ಥಿತಿ ಇದೆ.

**5. ಪುಟ್ಟ ಪೋರಿ ಏಕೆ ಮೂಕವಿಸ್ಮಿತಳಾಗಿದ್ದಾಳೆ?**

**ಉತ್ತರ:** ಹಬ್ಬದ ಆ ಸಂಭ್ರಮದಲ್ಲಿ ಒಡೆಯನ ಮನೆಯ ಬಾಗಿಲಲ್ಲಿ ತೂಗಾಡುತ್ತಿರುವ ಮಾವಿನೆಲೆಯ ತೋರಣ, ಮಲ್ಲಿಗೆ ಹೂವಲ್ಲಿ ಬೀರುವ ಮುಗುಳು ನಗೆಯನ್ನು ನೋಡಿ, ಹೊರಗೆ ಹಾಕಿರುವ ಹೊಳೆಯುವ ರಂಗೋಲಿಯಲ್ಲಿ ಥಳಥಳ ಎಂದು ಹೊಳೆಯುವ ಬಾಲ ರವಿಯ ಕಂಡು ಮೂಕವಿಸ್ಮಿತಳಾಗಿದ್ದಾಳೆ.

**6. 'ವಸಂತ ಮುಖ ತೋರಲಿಲ್ಲ' ಕವನದ ಆಶಯವೇನು ?**

**ಉತ್ತರ:** ನಮ್ಮ ಸಮಾಜದಲ್ಲಿ ಇಂದಿಗೂ ಎಷ್ಟೋ ಜನರು ಶೋಷಣೆಗೊಳಗಾಗಿದ್ದಾರೆ. ಮಹಿಳಾ ಶೋಷಣೆಯೆಂಬುದು ಭ್ರೂಣದಿಂದಲೇ ಪ್ರಾರಂಭವಾಗುವುದು. ಅದು ಅವಳ ಬಾಲ್ಯ, ಯೌವನ, ಮುಪ್ಪು ಎಲ್ಲವನೂ ಆಕ್ರಮಿಸಿಕೊಂಡಿದೆ. ಸಾಮಾಜಿಕ ನ್ಯಾಯ ದೊರೆತು, ಶೋಷಣೆ ಮುಕ್ತ ಸಮಾಜವಾದರೆ ಮಾತ್ರ ಸರ್ವರ ಏಳಿಗೆ ಸಾಧ್ಯ ಎಂಬುದು 'ವಸಂತ ಮುಖ ತೋರಲಿಲ್ಲ' ಕವನದ ಆಶಯವಾಗಿದೆ.

ಜ್ಞಾನದೀಪ
ರಚನೆ–ಸಂಗ್ರಹ–ಹಂಚಿಕೆ